ಸ್ವಾಭಿಮಾನಕ್ಕೆ ಧಕ್ಕೆ ಉಂಟುಮಾಡಿತೇ? ಅಥವಾ, ನಾನು ಅವಳಿಗೆ ಬೇಸರಮಾಡಿದನೋ? ಹೇಗಾದರೂ ಹಾಳಾಗಿ ಹೋಗಲಿ ಎಂದು ತೀರ್ಮಾನಿಸಿಬಿಟ್ಟಳೇ? ಛೇ... ಛೇ... ಹಾಗಿರಲಾರದು. ಹಾಗಿದ್ದರೆ ನನ್ನನ್ನು ಕಳೆದುಕೊಳ್ಳುವುದರಲ್ಲಿ ಯಾಕವಳು ಅಷ್ಟೊಂದು ಶೋಕವನ್ನು ಕೋಪವನ್ನು ವ್ಯಕ್ತಪಡಿಸುತ್ತಾಳೆ? ಅಷ್ಟು ಮಾತ್ರವಲ್ಲ, ಹೆಣ್ಣಿಗೆ ಅನುಗುಣವಾದ ಸಾಂಪ್ರದಾಯಿಕ ಅಡೆತಡೆಗಳನ್ನು ಮೀರಿ, ಇಲ್ಲಿಯವರೆಗೆ ಎಲ್ಲೂ ಕಂಡರಿಯದ ಕೌತುಕವಾಗಿ, ಕಾಮಶಾಸ್ತ್ರದ ಬಗ್ಗೆ ಒಬ್ಬ ಸನ್ಯಾಸಿಯ ಬಳಿ ಬಹಿರಂಗ ಸಭೆಯಲ್ಲಿ ಧೈರ್ಯವಾಗಿ ಪ್ರಶ್ನಿಸಿದಳಲ್ಲವೇ? ಈ ಚಾತುರ್ಯ ನನ್ನನ್ನು ಹೇಗಾದರೂ ಅವಳ ಬಳಿ ಉಳಿಸಿಕೊಳ್ಳಬೇಕೆಂಬ ಆಸೆಯಿಂದ ತಾನೇ?

ಅದರನಂತರ ಅವರಿಬ್ಬರೂ ಏನೂ ಮಾತನಾಡಲಿಲ್ಲ. ಮಂಡನ ಮಿಶ್ರ ಮೌನವಾಗಿ, ಮಂಚದ ಮೇಲೆ ಒರಗಿಕೊಂಡೇ ಸೂರಿನ ಕಡೆ ನೋಟವನ್ನು ಬೀರಿದರು. ಹೊರಗೆ ಕತ್ತಲು ಕವಿದಿತ್ತು. ದೂರದಲ್ಲಿ ಅಲ್ಲಲ್ಲಿ ತಾರೆಗಳಂತೆ ಸಣ್ಣ ಸಣ್ಣ ಚುಕ್ಕೆಗಳು ಮಿನುಗುತ್ತಿದ್ದವು. ಅವು ಮನೆಗಳ ಮೇಲೆ ಬೆಳಗಿರುವ ದೀಪಗಳಾಗಿರಬೇಕು. ಹಗಲಲ್ಲಿ ಸ್ವಲ್ಪ ಉದ್ದನೆಯ ಗೆರೆಯಂತೆ ಕಾಣುವ ನರ್ಮದೆ ಈ ಕತ್ತಲಲ್ಲಿ, ತಾನಿರುವ ಜಾಗ ತಿಳಿಯದಂತೆ ಇರುಳಿನಲ್ಲಿ ಬೆರೆತುಹೋಗಿದ್ದಳು. ಹಗಲೆಲ್ಲ ಅವಳ ಮೇಲೆ ಎಡೆಯಿಲ್ಲದೆ ಅಡ್ಡಾದಿಡ್ಡಿಯಾಗಿ ತೇಲುತ್ತ ಹಾದುಹೋಗುವ ದೋಣಿಗಳು, ಮೂರನೆಯ ಈ ಜಾವದ ರಾತ್ರಿಯಲ್ಲಿ ತೀರಗಳಲ್ಲಿ ಕಟ್ಟಲ್ಪಟ್ಟು, ಆರ್ಭಟವಿಲ್ಲದೆ ಒಂದು ಪಕ್ಕದಲ್ಲಿ ಬಿದ್ದುಕೊಂಡಿರುತ್ತವೆ. ಬಹಳಷ್ಟು ನಾವಿಕರು ಆ ದೋಣಿಯಲ್ಲಿಯೇ ಮಲಗಿ ನಿದ್ರಿಸುತ್ತಿರಬಹುದು. ಬೆಳಗಾದ ಕೂಡಲೇ ಅವರು ಎಚ್ಚರಗೊಂಡು, ತಮ್ಮ ಬೆಳಗಿನ ಶೌಚ ಕಾರ್ಯಗಳನ್ನು ಮುಗಿಸಿ, ಎಂದಿನಂತೆ ಜನಗಳನ್ನು ಹತ್ತಿಸಿಕೊಂಡು, ಯಾವ ಚಿಂತೆಯೂ ಇಲ್ಲದೆ ಹಾಡುಗಳನ್ನು ಹಾಡುತ್ತಾ ಈ ನರ್ಮದೆಯನ್ನು ದಾಟಲು ತೊಡಗುವರು. ನಾವಿಕರು ಪಾಮರರು. ಯಾವ ಶಾಸ್ತ್ರವನ್ನೂ ಅರಿಯದವರು. ಆದರೂ ನರ್ಮದೆಯನ್ನು ಹಾಯುವುದು ಅವರಿಗದೆಷ್ಟು ಸುಲಭವಾಗಿದೆ!

ಮಂಡನ ಮಿಶ್ರ ಅವರ ನೋಟವನ್ನು ಸರಸವಾಣಿಯ ಕಡೆ ತಿರುಗಿಸಿದರು. ಅವಳು ಈಗ ಗಾಢ ನಿದ್ದೆಯಲ್ಲಿದ್ದಳು. ಮಂಡನ ಮಿಶ್ರರು ತಮ್ಮ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡು, ಕೆಳಗೆ ಸರಿದು ಆರಾಮವಾಗಿ ಮಲಗಿಕೊಂಡರು. ಯಾವಾಗ ನಿದ್ದೆ ಬರುವುದೆಂದು ತಿಳಿಯದು. ಮುಚ್ಚಿದ ಕಣ್ಣುಗಳೊಳಗೆ ನರ್ಮದೆ ಬಳುಕುತ್ತಾ ಕುಲುಕುತ್ತಾ ಹರಿದಳು. ಅವಳ ಮೇಲೆ ದೋಣಿಗಳು ಅನಾಯಾಸವಾಗಿ ಅಡ್ಡಾದಿಡ್ಡಿ ಅಲೆಯುತ್ತಿದ್ದವು.

ಮಾರನೆಯ ದಿನ ಬೆಳಗಾಗಿ ಒಂದು ಗಳಿಗೆ ಆಗಿತ್ತು. ಮಂಡನ ಮಿಶ್ರರ ಮಾಳಿಗೆಯ ಅಂಗಳದ ಗಿಳಿಗಳು ದಿಢೀರೆಂದು ರೆಕ್ಕೆಗಳನ್ನು ಬಡಿಯುತ್ತಾ ಶಬ್ದಮಾಡಿದವು. ಒಳಗೆ ಕೆಲಸ ಮಾಡುತ್ತಿದ್ದ ಸರಸವಾಣಿಯ ಮನಸ್ಸು ಚುರ್ ಎನಲು ಹೊರಗೆ ಬಂದು ನೋಡಿದಳು. ಅವಳನ್ನು ನೋಡಿದಕೂಡಲೇ ಗಿಳಿಗಳು ಎಂದಿನಂತೆ ಏಕ ಕಾಲದಲ್ಲಿ, "ಸರಸವಾಣಿ, ಸರಸವಾಣಿ..." ಎಂದು ಅವಳ ಹೆಸರನ್ನು ಉಚ್ಚರಿಸುತ್ತ ಕಿರುಚಿದವು. ಕಾರಣವಿಲ್ಲದೆ ಈ ಗಿಳಿಗಳು ಇಷ್ಟೊಂದು ಶಬ್ದಮಾಡುವುದಿಲ್ಲ ಎಂಬುದು ಅವಳಿಗೆ ಗೊತ್ತು. ಅವಳು ಹೊಸಿಲಿನ ಕಡೆ ನೋಡಿದಳು. ಅವಳು ಹೆದರಿದ್ದು ಘಟಿಸಿಯೇಬಿಟ್ಟಿತು. ಆ ಸನ್ಯಾಸಿ ಬಾಗಿಲನ್ನು ತೆರೆದುಕೊಂಡು ಮುಗುಳ್ನಗುತ್ತ ಒಳಗೆ ಬರುತ್ತಿದ್ದರು. ಈ ಸಲ ಅವರು ಒಳಗೆ ಬರಲು ಅಂದಿನಂತೆ 'ಆಕಾಶ ಮಾರ್ಗ' ಬೇಕಿರಲಿಲ್ಲ. ಅವರ ಕಾಲುಗಳು 'ಭೂಮಿ'ಗೆ ಇಳಿದಿದ್ದವು.

ಒಳಾಂಗಣದಲ್ಲಿ ಎದುರೆದುರು ಮಣೆಗಳ ಮೇಲೆ ಸರಸವಾಣಿಯೂ ಶಂಕರರೂ